ದಿಃ 20-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**ಪಾಟೀ ಸವಾಲು ಶ್ರೀ. ಕೆ ಬಿ ಎಚ ವಕೀಲರಿಂದಃ**

ನಾನು 10 ನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ. ದಾವೆ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಮತ್ತು ನನ್ನ ಸಹೋದರಿಯರು ಮತ್ತು ನಮ್ಮ ತಾಯಿ ನೀಡಿರುತ್ತೇವೆ. ದಾವೆಗೆ ಹಾಜರು ಪಡಿಸಿರುವ ದಾಖಲೆಯನ್ನು ನಾನೇ ತೆಗೆದಿದ್ದೇನೆ. ನಾನು ಕೊಟ್ಟ ಮಾಹಿತಿ ಪ್ರಕಾರ ವಕೀಲರು ವಾದ ಪತ್ರ ತಯಾರಿಸಿರುತ್ತಾರೆ. ವಾದ ಪತ್ರವನ್ನು ಓದಿ ನಂತರ ಸಹಿ ಮಾಡಿರುತ್ತೇನೆ. ವಕೀಲರಿಗೆ ಆಸ್ತಿಗಳ ಚೆಕಬಂದಿ ಹೇಳಿರುತ್ತೇನೆ. ವಕೀಲರು ಚೆಕಬಂದಿ ಕಾಣಿಸಿರುತ್ತಾರೆ. 812 ರ ಆಸ್ತಿಯ ಪೂರ್ವಕ್ಕೆ ರೇಲ್ವೆ ಹಳಿ, ಪಶ್ಚಿಮಕ್ಕೆ ಮಾರುತಿ ಪಾಟೀಲ ಆಸ್ತಿ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ರಾಮಪ್ಪಾ ಪೂಜಾರಿ ಆಸ್ತಿ. 820 ರ ಆಸ್ತಿಯ ಪೂರ್ವಕ್ಕೆ ಕಟ್ಟೆಪ್ಪಾ ಪೂಜಾರಿ, ಪಶ್ಚಿಮಕ್ಕೆ ಶಂಕರ ಪಾಟೀಲ ಆಸ್ತಿ, ಉತ್ತರಕ್ಕೆ ಮಲಕಾರಿ ಪೂಜಾರಿ, ದಕ್ಷಿಣಕ್ಕೆ ಮಾರುತಿ ಪಾಟೀಲ ಮತ್ತು ಸಿದ್ರಾಮ ಪಾಟೀಲ ಆಸ್ತಿ. 846 ರ ಆಸ್ತಿಯ ಪೂರ್ವಕ್ಕೆ ಕಟ್ಟೆಪ್ಪಾ ಪೂಜಾರಿ, ಪಶ್ಚಿಮಕ್ಕೆ ಗೊತ್ತಿಲ್ಲ ಆಸ್ತಿ, ಉತ್ತರಕ್ಕೆ ಮಿಲನ ಪಾಟೀಲ ಆಸ್ತಿ, ದಕ್ಷಿಣಕ್ಕೆ ಸಿದ್ರಾಮ ಪಾಟೀಲ ಆಸ್ತಿ. ಈ ಚೆಕಬಂದಿಯನ್ನು ವಾದ ಪತ್ರದಲ್ಲಿ ಕಾಣಿಸಲು ತೊಂದರೆ ಇಲ್ಲ.

ನನ್ನ ತಂದೆಯು ತಂದೆಯ ಹೆಸರು ವಿಠ್ಠಲ. ಅವರಿಗೆ 4 ಹೆಣ್ಣು ಮಕ್ಕಳು ಮೂರು ಜನ ಗಂಡು ಮಕ್ಕಳು. ಅವರುಗಳೆಂದರೆ ರಾಯಪ್ಪಾ, ದೇವಪ್ಪಾ ರಾಮಪ್ಪಾ ದೇವಕ್ಕಿ, ಭಾಗವ್ವಾ ಹೊನ್ನವ್ವಾ, ರುಕ್ಮವ್ವಾ ನನ್ನ ತಂದೆ ದಿನಾಂಕಃ 21/11/2012 ರಂದು ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ 3 ಜನ ಹೆಣ್ಣು ಮಕ್ಕಳು 2 ಗಂಡು ಮಕ್ಕಳು. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಸಂಬಂಧ ಸಹೋದರರ ಜೊತೆ ಚೆನ್ನಾಗಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಹಿರಿಯರ ಆಸ್ತಿಗೆ ನಮ್ಮ ಹೆಸರು ಹತ್ತಿತ್ತು ಎಂದರೆ ಸಾಕ್ಷಿ ಅರ್ಧ ಆಸ್ತಿಗೆ ಹತ್ತಿತ್ತು ಇನ್ನೂ ಅರ್ಧ ಆಸ್ತಿಗೆ ಹತ್ತಿಲ್ಲ ಎಂದು ಹೇಳುತ್ತಾರೆ. 2012 ರಲ್ಲಿ ವಾರಸಾ ಮುಖಾಂತರ ನಮ್ಮ ಹೆಸರು

ಹತ್ತಿತ್ತು. ನನ್ನ ಸಹೋದರಿ ದೇವಕಿ ಅರ್ಜಿ ನೀಡಿದ್ದರು. ಅವರಿಗೆ ಹಿರಿಯರ ಆಸ್ತಿ ಯಾವವು ಎಂದು ಗೊತ್ತಿತ್ತು ಆ ಪ್ರಕಾರ ಅರ್ಜಿ ನೀಡಿದ್ದರು ಎಂದರೆ ಸರಿ. ಆ ಪ್ರಕಾರ ನಾವು 6 ಜನ ಹೆಸರು ಪಹಣಿ ಪತ್ರಿಕೆಯಲ್ಲಿ ಇದೆ ಎಂದರೇ ಸರಿ.

ನಮ್ಮ ತಾಯಿ ನಮ್ಮ ಬಳಿ ಜೋಡಟ್ಟಿಯಲ್ಲಿ ಇದ್ದಾರೆ ನಮ್ಮ ತಾಯಿ 1 ನೇ ಪ್ರತಿವಾದಿ ಬಳಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಬಳಿ ಇರುತ್ತಾಳೆ ರಾತ್ರಿ ಮಾತ್ರ ಅಲ್ಲಿ ಹೋಗಿ ಮಲಗುತ್ತಾಳೆ ಎಂದು ಹೇಳುತ್ತಾರೆ. ನನ್ನ ತಾಯಿಯ ಉಟೋಪಚಾರ ಮತ್ತು ವೈಧ್ಯಕೀಯ ಉಪಚಾರವನ್ನು ನಮ್ಮ ಸಹೋದರರು ಮಾಡುತ್ತಾರೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ